## ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.17/2022

ಪಿ.ಡಬ್ಲ್ಯೂಃ 2

ಸಿ. ಡಬ್ಲ್ಯೂಃ 2

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಭಾಕರ್ ಲಿಂಗಪ್ಪ ನಾಯ್ಕ |
| ತಂದೆಯ ಹೆಸರು | : | ಲಿಂಗಪ್ಪ ನಾಯ್ಕ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಶಿರಕುಳಿ, ತಾಃ ಅಂಕೋಲಾ |

ದಿನಾಂಕಃ 15-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ** ಎ.ಪಿ.ಪಿ. ರವರಿಂದಃ

1. ದಿನಾಂಕ 14-08-2020 ರಂದು ನಾನು ಬಾಳೆಗುಳಿಯಲ್ಲಿ ಅರಣ್ಯ ಇಲಾಖೆಯಲ್ಲಿ ವಾಚ್ ಮ್ಯಾನ್ ಕೆಲಸ ನಿರ್ವಹಿಸುತ್ತಿದ್ದೆ. ಆಗ ಚಾಸಾ-1 ರವರು ಫೋನ್ ಮಾಡಿ ಅಂಕೋಲಾ ವಲಯ ಅರಣ್ಯ ಕಚೇರಿಗೆ ಕರೆಸಿಕೊಂಡರು. ಅಲ್ಲದೆ ಅವರು ನವಗದ್ದೆಯ ಸರ್ವೆ ನಂ.26 ರಲ್ಲಿ 1 ನೇ ಆರೋಪಿ ಕಡವೆಯನ್ನು ಹೊಡೆದಿದ್ದಾನೆ ಎಂದು ತಿಳಿಸಿದರು ಹಾಗೂ ಅರಣ್ಯ ಇಲಾಖೆಯ ಜೀಪಿನಲ್ಲಿ ಅಲ್ಲಿಗೆ ಹೋಗುವ ಎಂದು ತಿಳಿಸಿದರು. ಚಾಸಾ-1 ಮತ್ತು 3 ಹಾಗೂ 5 ರಿಂದ 7 ಆ ಜೀಪಿನಲ್ಲಿ ಮಧ್ಯಾಹ್ನ 2 ಘಂಟೆಗೆ ಹೋದೆವು. 1 ನೇ ಆರೋಪಿಯ ಮನೆ ಕಡೆಗೆ ಹೋಗುತ್ತಿದ್ದೆವು, ಅವರ ಮನೆಗೆ ಹೋಗುವ ಕಚ್ಚಾ ರಸ್ತೆಯಾಗಿತ್ತು. ಆ ರೀತಿ ಹೋಗುತ್ತಿರುವಾಗ 5 ಮೀಟರ್ ಅಂತರದಲ್ಲಿ ಒಂದು ಬೈಕು ಕಂಡಿತು. ಹಾಗಾಗಿ ನಾವು ಅಲ್ಲಿ 5 ನಿಮಿಷ ನಿಂತೆವು. ಆಗ ಕಾಡಿನ ಕಡೆಯಿಂದ ಇಬ್ಬರು ಪ್ಲಾಸ್ಟಿಕ್ ಚೀಲದಲ್ಲಿ ಏನೋ ಹಿಡಿದುಕೊಂಡು ಬರುತ್ತಿರುವುದು ಕಂಡಿತು. ಆಗ ಅವರು ನಮ್ಮನ್ನು ನೋಡಿದರು. ಆ

ಚೀಲವನ್ನು ಅಲ್ಲೆ ಎಸೆದು ಕಾಡಿನೊಳಗ ಅವರಿಬ್ಬರು ಓಡಿ ಹೋದರು. ಸಿಬ್ಬಂದಿಗಳು ಅವರನ್ನು ಬೆನ್ನಟ್ಟಿ ಹೋಗಿ ಹಿಡಿದುಕೂಂಡು ಬಂದರು.

2. ಅವರನ್ನು ಹಿಡಿದುಕೊಂಡು ಬಂದಾಗ ಅವರು ಬಿಸಾಡಿದ ಪ್ಲಾಸ್ಟಿಕ್ ಚೀಲವನ್ನು ತಂದು ಅವರ ಮುಂದೆ ಬಿಚ್ಚಿದರು. ಅದರಲ್ಲಿ 7–8 ಕೆ.ಜಿ.ಯಷ್ಟು ಹಸಿ ಮಾಂಸ ಕಂಡು ಬಂದಿತು. ಅವರಿಬ್ಬರಿಗೆ ಆ ಮಾಂಸ ಯಾವುದರ ಮಾಂಸ ಎಂದು ಕೇಳಿದರು. ಆಗ 2 ನೇ ಆರೋಪಿ ಕಡವೆ ಮಾಂಸ ಎಂದು ಹೇಳಿದರು. ಅವರಿಬ್ಬರ ಹೆಸರನ್ನು ಸಿಬ್ಬಂದಿಗಳು ಕೇಳಿಕೊಂಡರು. ಒಬ್ಬರು ಬ್ರಿಜೇಶ್ ಗೋಪಾಲ್ ನಾಯ್ಕು ಹಾಗೂ ಹನುಮ ಜಟ್ಟಿ ಗೌಡ ಎಂದು ತಿಳಿಸಿದರು. ಅವರಿಬ್ಬರಲ್ಲಿದ್ದ ತಲಾ ಒಂದು ಮೊಬೈಲ್ ಫೋನ್ ಅನ್ನು, ಆ ಮಾಂಸವನ್ನು ಹಾಗೂ ಆ ಬೈಕ್ ನಂ. ಕೆಎ–30–3537 ಅನ್ನು ಮಹಜರು ಮಾಡಿ ಜಪ್ತು ಮಾಡಿದರು ಮತ್ತು ಫೋಟೊ ತೆಗೆದಿರುತ್ತಾರೆ. ಮಹಜರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–1 ಬಿ ಎಂದು ಗುರುತಿಸಲಾಯಿತು. ಫೋಟೊಗಳನ್ನು ಮತ್ತು ಸಿ.ಡಿ.ಯನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಸಾಬೀತು ಪಡಿಸುವ ಜವಾಬ್ದಾರಿಯೊಂದಿಗೆ ಕ್ರಮವಾಗಿ ನಿಪಿ–2 ರಿಂದ 6 ಎಂದು ಗುರುತಿಸಲಾಗಿರುತ್ತದೆ. 2 ಮೊಬೈಲ್ ಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮುಮಾ–1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಸದ್ರಿ ಬ್ರಿಜೇಶ್ ಗೋಪಾಲ್ ನಾಯ್ಕು ಹಾಗೂ ಹನುಮ ಜಟ್ಟಿ ಗೌಡರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತಿದ್ದೇನೆ. ಸದ್ರಿ ಮುದ್ದೆ ಮಾಲು ಹಾಗು ಆರೋಪಿಗಳ ಜೊತೆ ಇಲಾಖಾ ವಾಹನದಲ್ಲಿ ವಲಯ ಕಚೇರಿಗೆ ಬಂದೆವು.

ಪಿ.ಡಬ್ಲ್ಯೂಃ 2

ಸಿ. ಡಬ್ಲ್ಯೂಃ 2

3. ಅದೇ ದಿವಸ ಸಂಜೆ 4.30 ಕ್ಕೆ ನಾಗೇಂದ್ರ ಕನ್ನಯ್ಯ ಗೌಡರ ಮನೆಗೆ ಚಾಸಾ-1 ಮತ್ತು 3 ಹಾಗೂ 5 ರಿಂದ 7 ರವರು ಹೋದೆವು. ಅವರ ಮನೆಯಲ್ಲಿ ಹೋಗಿ ಕೇಳಿದ್ದಾಗ ಅವರು ಇಲ್ಲ ಎಂದು ಹೇಳಿದರು. ಅವರನ್ನು ಅಲ್ಲೆ ಅಕ್ಕಪಕ್ಕ ಹುಡುಕಾಡಿದ್ದಾಗ, ಹಳ್ಳದ ಬಳಿ ಇರುವ ಒಂದು ಬಂಡೆಯ ಮೇಲೆ ಮಲಗಿದ್ದರು. ಸಿಬ್ಬಂದಿಗಳು ಅವರನ್ನು ಹಿಡಿದುಕೊಂಡರು. ಆಗ ಅವರನ್ನು ವಿಚಾರಿಸಲಾಗಿ ಅವರು 100 ಮೀಟರ್ ದೂರದಲ್ಲಿ ಹಳ್ಳದ ಹತ್ತಿರ ಕಡವೆಯನ್ನು ಹೊಡೆದಿರುವುದಾಗಿ ತಿಳಿಸಿದರು. ಅವರನ್ನು ಎಲ್ಲಿ ಕೊಂದಿರುವುದು ಎಂದು ಕೇಳಿದಾಗ ಹಳ್ಳದ ಹತ್ತಿರ ಕರೆದುಕೊಂಡು ಬಂದೆವು. ಅವರು ಎಲ್ಲಿ ಕೊಂದಿರುವುದು ಎಂದು ತೋರಿಸಿದರು. ಒಂದು ಕಡೆ ತಲೆ ಭಾಗ ಬಿದ್ದಿತ್ತು. ಇನ್ನೊಂದು ಕಡೆ 4 ಕಾಲುಗಳು ಹಾಗೂ ಚರ್ಮ ಮುಚ್ಚಿಟ್ಟಿದರು. ಹೊಟ್ಟೆಯ ಭಾಗ ಜೊತೆ ಮರಿಯನ್ನು ಹಳ್ಳದ ಬದಿ ಪೊದೆಯಲ್ಲಿ ಎಸೆದಿದ್ದದ್ದು ಕಂಡು ಬಂತು. ಅವರನ್ನು ಯಾವ ರೀತಿ ಕೊಂದಿರುವುದು ಎಂದು ಸಿಬ್ಬಂದಿಗಳು ಕೇಳಿದಾಗ, ಬಂದೂಕಿನಿಂದ ಕೊಂದೆ ಎಂದು ಹೇಳಿದರು. ಆ ಬಂದೂಕು ಎಲ್ಲಿಟ್ಟಿದ್ದೀರಿ ಎಂದು ಕೇಳಿದರು. ಬಿ.ಡಿ. ಗೌಡರ ತೋಟದಲ್ಲಿ ಬಂದೂಕು ಬಚ್ಚಿಟ್ಟಿದ್ದೇನೆ ಎಂದು ಹೇಳಿದರು.

4. ಆತನನ್ನು ಕರೆದುಕೊಂಡು ಹೋಗಲಾಗಿ ಆ ಬಂದೂಕನ್ನು ಅವರು ತೆಗೆದು ಕೊಟ್ಟರು. ಬಂದೂಕು ಬಿಟ್ಟು ಬೇರೆ ಯಾವುದರಲ್ಲಿ ಕೊಂದೆ ಎಂದು ಕೇಳಿದಾಗ, ಆತ ಕತ್ತಿ ತೆಗೆದುಕೊಟ್ಟರು. ಆ ಸಮಯದಲ್ಲಿ ಮೇಲಾಧಿಕಾರಿಗಳಾದ ಡಿ.ಎಫ್.ಓ. ರವರು ಬಂದಿದ್ದರು. ಪಶು ವೈದ್ಯಾಧಿಕಾರಿಯನ್ನು ಅಲ್ಲಿಗೆ ಕರೆಸಿದರು. ಕಡವೆಯ ಭಾಗವನ್ನು ತೆಗೆದುಕೊಂಡು ಬಂದು ಗುಂಡು ಬಿದ್ದ ಚರ್ಮದ ಭಾಗವನ್ನು ಕತ್ತರಿಸಿ ತೆಗೆದುಕೊಂಡು ಒಂದು ಡಬ್ಬಿಯಲ್ಲಿ ತುಂಬಿದರು. ಅಲ್ಲಿ ಪಂಚನಾಮೆ ಬರೆದು ಆ ಬಂದೂಕು, ಕತ್ತಿ, ಚರ್ಮ ತೆಗೆದುಕೊಂಡು ಫೋಟೊ ತೆಗೆದರು. ಅವುಗಳನ್ನು ತೆಗೆದುಕೊಂಡು ಹಾಗೂ ಸದ್ರಿ

ವ್ಯಕ್ತಿಯನ್ನು ಕರೆದುಕೊಂಡು ಅಂಕೋಲಾ ವಲಯ ಕಚೇರಿಗೆ ಬಂದೆವು. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-7 ಬಿ ಎಂದು ಗುರುತಿಸಲಾಯಿತು. ಫೋಟೊಗಳನ್ನು ಮತ್ತು 1 ಸಿ.ಡಿ.ಯನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಸಾಬೀತು ಪಡಿಸುವ ಜವಾಬ್ದಾರಿಯೊಂದಿಗೆ ಕ್ರಮವಾಗಿ ನಿಪಿ-8 ರಿಂದ 14 ಎಂದು ಗುರುತಿಸಲಾಗಿದೆ. ಬಂದೂಕು ಮತ್ತು ಕತ್ತಿಯನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮುಮಾ-3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ಮುಮಾ-3 ರ ಪ್ಯಾಕಿಗೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸುತ್ತಿದ್ದು, ಅದನ್ನು ಮುಮಾ-3 ಬಿ ಎಂದು ಗುರುತಿಸಲಾಯಿತು. ಮಾದರಿ ಚರ್ಮದ ಭಾಗವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮುಮಾ-5 ಎಂದು ಗುರುತಿಸಲಾಗಿದೆ. ಮುಮಾ-5 ರ ಪ್ಯಾಕಿಗೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸುತ್ತಿದ್ದು, ಅದನ್ನು ಮುಮಾ-5 ಬಿ ಎಂದು ಗುರುತಿಸಲಾಯಿತು. ಸದ್ರಿ ನಾಗೇಂದ್ರ ಕನ್ನೆಯ್ಯ ರವರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತಿದ್ದೇನೆ.

5. ದಿನಾಂಕ 17-08-2020 ರಂದು ನ್ಯಾಯಾಲಯದ ಆದೇಶದಂತೆ ವಲಯ ಅರಣ್ಯ ಕಚೇರಿಯ ಬಳಿ ಇರುವ ಎ.ಸಿ.ಎಫ್. ರವರ ವಸತಿಗೃಹದ ಹಿಂದುಗಡೆ ಮಾಂಸಗಳನ್ನು ಬೆಂಕಿ ಹಾಕಿ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಘಂಟೆಯ ತನಕ ಪಂಚನಾಮೆ ಮಾಡಿ ಸುಡಲಾಯಿತು. ಆ ಸಮಯದಲ್ಲಿ ಫೋಟೊ ತೆಗೆಯಲಾಯಿತು. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-20 ಬಿ ಎಂದು ಗುರುತಿಸಲಾಯಿತು. ಫೋಟೊಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಸಾಬೀತು ಪಡಿಸುವ

ಪಿ.ಡಬ್ಲ್ಯೂಃ 2

ಸಿ. ಡಬ್ಲ್ಯೂಃ 2

ಜವಾಬ್ದಾರಿಯೊಂದಿಗೆ ಕ್ರಮವಾಗಿ ನಿಪಿ–21 ರಿಂದ 25 ಎಂದು ಗುರುತಿಸಲಾಗಿದೆ. ಮೇಲ್ಕಂಡ ವಿಚಾರ ಬಿಟ್ಟು ಬೇರೆ ಯಾವುದನ್ನು ನಾನು ನೋಡಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲು ಮಾನ್ಯ ಎ.ಪಿ.ಪಿ. ರವರು ಕೋರಿದ್ದು, ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ. ರವರಿಂದ

6. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–26 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–26 ಬಿ ಎಂದು ಗುರುತಿಸಲಾಯಿತು. ನಿಪಿ–26 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ–9 ರವರನ್ನು ಕರೆದುಕೊಂಡು ಬಂದು ಮುಮಾ–3 ರಲ್ಲಿದ್ದ 4 ಸೀಸಾದ ಗುಂಡುಗಳು ಹಾಗೂ ಗನ್ ಪೌಡರ್ ಅನ್ನು ನನ್ನ ಸಮಕ್ಷಮ ಚಾಸಾ–9 ರವರು ತೆಗೆದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಿಪಿ–26 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗ ನಾನು ಸಹಿ ಮಾಡಿದ್ದು ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದುದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲನ್ನು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.